**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.255/2020**

**Cw-6 Pw-5**

| | | |
|---|---|---|
| ಸಾಕ್ಷಿದಾರನ ಹೆಸರು | : | ಜಿಲಾನಿಪಾಷ ತಂದೆ ಸೈಯದ್ ಶಂಶುದ್ದೀನ್ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಕಿರಿಯ ಅಭಿಯಂತರರು ವಿದ್ಯುತ್ |
| ವಾಸಸ್ಥಳ | : | ರಾಯಚೂರು |
| ಪ್ರಮಾಣೀಕರಿಸಿದ ದಿನಾಂಕ | : | 26-07-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು 2019 ರಿಂದ 2023 ರ ವರೆಗೆ ಗಲಗನಲ್ಲಿ ವಿದ್ಯುತ್ ಕಿರಿಯ ಅಭಿಯಂತರರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಜಾಲಹಳ್ಳಿ ಪೊಲೀಸರು ನಮ್ಮ ಇಲಾಖೆಗೆ ದಿನಾಂಕ **12-12-2019** ರಂದು ಘಟನಾ ಸ್ಥಳದಲ್ಲಿ ವಿದ್ಯುತ್ ಇತ್ತೋ ಇಲ್ಲವೋ ಎಂಬುದರ ಬಗ್ಗೆ ನಮ್ಮ ಇಲಾಖೆಗೆ ಪತ್ರ ಬರೆದಿದ್ದು ನಾವು ಈ ಬಗ್ಗೆ ಆ ಸಮಯದಲ್ಲಿ ವಿದ್ಯುತ್ ಪೂರೈಕೆ ಇತ್ತು ಎಂದು ವರದಿಯನ್ನು ಕೊಟ್ಟಿರುತ್ತೇವೆ**.** ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-2** ಎಂದು ಗುರುತಿಸಲಾಯಿತು**.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ನನ್ನ ಕರ್ತವ್ಯ ಸ್ಥಳ ಗಲಗ ಆಗಿರುತ್ತದೆ. ನನ್ನದು ಫಿಲ್ಡ ವರ್ಕ ಇರುತ್ತದೆ. ನಮ್ಮ ಇಲಾಖೆಯ ಅಸಿಸ್ಟಂಟ್ ಇಂಜಿನಿಯರ್ ಬಳಿ ವಿದ್ಯುತ್ ಪೂರೈಕೆಯ ಬಗ್ಗೆ ರಿಜಿಸ್ಟರ ಪುಸ್ತಕ ಇದ್ದು ಅದರ ಆಧಾರದ ಮೇರೆಗೆ ನಾವು ವಿದ್ಯುತ್ ಪೂರೈಕೆಯ ಬಗ್ಗೆ ವರದಿಯನ್ನು ಸಲ್ಲಿಸಿರುತ್ತೇವೆ. ಒಂದು ವಿದ್ಯುತ್ ಲೈನ್ ಸುಮಾರು 20 ಕಿ.ಮೀ ವರೆಗೆ ಇರುತ್ತದೆ. ನಾವು ಸಲ್ಲಿಸಿದ ನಿಪಿ-2 ನಾಲ್ಕು ಹಳ್ಳಿಗಳನ್ನು ಒಳಗೊಂಡ ಒಂದು ವಿದ್ಯುತ್ ಲೈನ್ ಆಗಿರುತ್ತದೆ. ಅಂದರೆ ನಿಪಿ-2 ರಲ್ಲಿ ನಮೂದಿಸಿದ ದಿನಾಂಕ ಹಾಗೂ ಸಮಯದಲ್ಲಿ ಮೇಲೆ ಹೇಳಿದ ನಾಲ್ಕು ಹಳ್ಳಿಗಳಿಗೂ ವಿದ್ಯುತ್ ಪೂರೈಕೆ ಇತ್ತು. ನಾಲ್ಕು ಹಳ್ಳಿಗಳಲ್ಲಿ ಸುಮಾರು 30 ರಿಂದ 40 ಟಿ.ಸಿ ಗಳು ಇರುತ್ತವೆ. ಒಂದು ಟಿ.ಸಿ ಯಲ್ಲಿ ವಿದ್ಯುತ್ ವ್ಯತೆಯ ಆದರೆ ಅದು ನಮಗೆ ಗೊತ್ತಾಗುವುದಿಲ್ಲ ಎಂದರೆ ನಿಜ ಮತ್ತು ಈ ವಿಷಯ ನಮ್ಮ ಇಲಾಖೆಯ ರಿಜಿಸ್ಟರನಲ್ಲಿ ನಮೂದು ಆಗುವುದಿಲ್ಲ. ಪೊಲೀಸರು ನಮಗೆ ಪತ್ರವನ್ನು ದಿನಾಂಕ 12-12-2019 ರಂದು ಕೊಟ್ಟಿರುತ್ತಾರೆ. ಪತ್ರವನ್ನು ನಮಗೆ ಎಷ್ಟು ಗಂಟೆಗೆ ಕೊಟ್ಟಿರುತ್ತಾರೆ ಗೊತ್ತಿಲ್ಲ. ಪತ್ರವನ್ನು ನಮ್ಮ ಇಲಾಖೆಗೆ ಕೊಟ್ಟ ಬಗ್ಗೆ ನಮ್ಮ ಆವಕ ಜಾವಕ ಪುಸ್ತಕದಲ್ಲಿ ನಮೂದು ಇರುತ್ತದೆ ಮತ್ತು ಸದರಿ ಪುಸ್ತಕದಲ್ಲಿ ಎಷ್ಟು ಗಂಟೆಗೆ ಪತ್ರವನ್ನು ಸಲ್ಲಿಸಿದ್ದರು ಎಂಬ ಬಗ್ಗೆ ಮಾಹಿತಿ ಇರುತ್ತದೆ. ನಮ್ಮ ಇಲಾಖೆ

ಬೆಳಿಗ್ಗೆ 10-00 ಗಂಟೆಯಿಂದ ಸಾಯಂಕಾಲ 5-30 ಗಂಟೆಯವರೆಗೆ ಇರುತ್ತದೆ. ಅಂದರೆ ಪೊಲೀಸರು ನಮಗೆ ಪತ್ರವನ್ನು ನಮ್ಮ ಕಚೇರಿಯ ಸಮಯದಲ್ಲಿಯೇ ತಂದು ಕೊಟ್ಟಿರುತ್ತಾರೆ. ಪೊಲೀಸರ ಮಾತು ಕೇಳಿ ನಾವು ಸುಳ್ಳು ನಿಪಿ-2 ನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.